ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ
AKKAMAHADEVI WOMEN'S UNIVERSITY, VIJAYAPUR

ಕುಲಸಚಿವರು (ಮೌಲ್ಯಮಾಪನ) | Registrar (Evaluation)
ವಿಜಯಪುರ-586108 | Vijayapur-586108
Phone Number -08352-209126 | Fax Number-08352-229123

ಕ್ರ ಸಂಖ್ಯೆ: ಅಮಮವಿವಿ/ ಪ ವಿ/ /2017-18/ 6589 ದಿನಾಂಕ: 16 -03- 2018

ಅಧಿಸೂಚನೆ

**ವಿಷಯ:** ಎಪ್ರೀಲ್/ಮೇ 2018 ನೇ ಸಾಲಿನಲ್ಲಿ ಜರುಗುವ ಎಲ್ಲಾ ಪದವಿ ದ್ವಿತೀಯ, ನಾಲ್ಕನೇ, ಐದನೇ(ರಿ) ಹಾಗೂ ಆರನೇ ಸೆಮಿಸ್ಟರ್ ವಿದ್ಯಾರ್ಥಿನಿಯರು ಪರೀಕ್ಷೆಗಳಿಗೆ ಆನಲೈನನಲ್ಲಿ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:

***

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಬಿ.ಎ/ಬಿ.ಎಸ್ಸಿ/ಬಿ.ಕಾಂ/ ಬಿಬಿಎ/ ಬಿಎಸ್‌ಡಬ್ಲ್ಯೂ/ ಬಿ.ಎಫ್.ಟಿ/ ಬಿಸಿಎ/ ಬಿ.ಎಚ್.ಎಸ್ಸಿ/ ಪರೀಕ್ಷೆಗಳಿಗೆ ಆನಲೈನನಲ್ಲಿ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು ಈ ಕೆಳಗಿನಂತೆ ದಿನಾಂಕಗಳನ್ನು ನಿಗದಿ ಪಡಿಸಿ ಅಧಿಸೂಚನೆ ಹೊರಡಿಸಲಾಗಿದೆ.

**ಆನಲೈನ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ 21-03-2018.**

| ವಿದ್ಯಾರ್ಥಿನಿಯರು ಆನಲೈನ್ ಮುಖಾಂತರ ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬೇಕಾದ ಅಂತಿಮ ದಿನಾಂಕ | | ಪ್ರಾಂಶುಪಾಲರು Candidate List ನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಅಂತಿಮ ದಿನಾಂಕ | ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | |
|---|---|---|---|---|
| ದಂಡಶುಲ್ಕವಿಲ್ಲದೆ | ರೂ/-120 ದಂಡಶುಲ್ಕ ಸಹಿತ | **15-4-2018** | ಲಿಖಿತ ಪರೀಕ್ಷೆ | ಪ್ರಾಯೋಗಿಕ ಪರೀಕ್ಷೆ |
| 05-04-2018 | 10-04-2018 | | ಎಪ್ರೀಲ್ ಕೊನೆಯ ವಾರ | ಎಪ್ರೀಲ್ 11-21 |

ಪರೀಕ್ಷಾ ಶುಲ್ಕ/ಅಂಕಪಟ್ಟಿ ಶುಲ್ಕ ಹಾಗೂ ಅರ್ಜಿ ಪರಿಶೀಲನಾ ಶುಲ್ಕ

| B.A,B.Com,B.B.A,B.S.W,B.F.T II,IV & VI Semister | | B.C.A/B.Sc II, IV & VI Semister | B.H.Sc II, IV &VI Semister |
|---|---|---|---|
| ಪರೀಕ್ಷಾ ಶುಲ್ಕ | ರೂ. 595/- | ರೂ. 654/- | ರೂ. 786/- |
| ಅಂಕಪಟ್ಟಿ ಶುಲ್ಕ | ರೂ. 198/- | ರೂ. 198/- | ರೂ. 198/- |
| ಪರಿಶೀಲನಾ ಶುಲ್ಕ | ರೂ. 13/- | ರೂ. 13/- | ರೂ. 13/- |
| ಒಟ್ಟು ಶುಲ್ಕ | ರೂ. 806/- | ರೂ. 865/- | ರೂ. 997/- |
| ಪುನರಾವರ್ತಿತ ಪ್ರತಿ ವಿಷಯಕ್ಕೆ | ರೂ. 110/- | ರೂ. 132/- | ರೂ. 132/- |
| ಐದನೇ ಸೆಮಿಸ್ಟರ್ ಪುನರಾವರ್ತಿತ ಪ್ರತಿ ವಿಷಯಕ್ಕೆ. 484+198+13=695 | | | |

ಸೂಚನೆ: 1) ಪ್ರತಿ ವಿಷಯಕ್ಕೆ ಅನ್ವಯ ವಾಗುವ ಪರೀಕ್ಷಾ ಶುಲ್ಕ ಜೊತೆಗೆ ಅಂಕಪಟ್ಟಿ ಹಾಗೂ ಪರಿಶೀಲನಾ ಶುಲ್ಕಗಳನ್ನು ಮೇಲೆ ನಮೂದಿಸಿದಂತೆ ಪೂರ್ತಿಯಾಗಿ ಭರಿಸಬೇಕು.

2)ಪುನರಾವರ್ತಿತ (Repeaters) ವಿದ್ಯಾರ್ಥಿನಿಯರು ಮೂರು ವಿಷಯಕ್ಕಿಂತ ಹೆಚ್ಚಿನ ವಿಷಯಗಳಿಗೆ ಪರೀಕ್ಷೆಗೆ ಹಾಜರಾಗುತ್ತಿದ್ದಲ್ಲಿ ಇತರ ಶುಲ್ಕಗಳೊಂದಿಗೆ ಪೂರ್ಣ ಪ್ರಮಾಣದ ಶುಲ್ಕ ಭರಿಸಬೇಕು.

3)ಪದವಿ ಅಂತಿಮ ಸೆಮಿಸ್ಟರ ವಿದ್ಯಾರ್ಥಿನಿಯರು ಪಾಸಿಂಗ ಸರ್ಟಿಫಿಕೇಟ ಶುಲ್ಕ 198/- ರೂ.ಗಳನ್ನು ಹಾಗೂ ಘಟಿಕೋತ್ಸವ ಪ್ರಮಾಣ ಪತ್ರದ ಶುಲ್ಕ 1000/- ಪ್ರತ್ಯೆಕವಾಗಿ ಪರೀಕ್ಷಾ ಶುಲ್ಕದ ಜೊತೆಗೆ ಆನಲೈನ್ನಲ್ಲಿ ತುಂಬಬೇಕು.

4)BBA/BCA/BSW ಅಂತಿಮ ಸೇಮಿಸ್ಟರ ವಿದ್ಯಾರ್ಥಿನಿಯರು 242/- ರೂ Project Viva ಶುಲ್ಕ ಆನಲೈನ್ನಲ್ಲಿ ಭರಿಸತಕ್ಕದ್ದು

<u>ಎಲ್ಲ ಪ್ರಾಂಶುಪಾಲರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ಸೂಚನೆ</u>

1. ವಿದ್ಯಾರ್ಥಿಗಳು Online ಮುಖಾಂತರ ಅರ್ಜಿಸಲ್ಲಿಸಲು logisys.net.in/studentportal/. ನಲ್ಲಿ login ಆಗಿ ನೋಂದಣಿ ಸಂಖ್ಯೆ, ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರವಾರು/ವಿಷಯವಾರು ಗುರುತುಮಾಡಿದ ನಂತರ ಶುಲ್ಕದ ವಿವರಗಳುಳ್ಳ ಅರ್ಜಿ ಮುದ್ರಿಸಿ ಅಂಚೆ ಕಛೇರಿಯಲ್ಲಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ವಿದ್ಯಾರ್ಥಿನಿಯರು ಮಹಾವಿದ್ಯಾಲಯದಲ್ಲಿ ಸಲ್ಲಿಸಬೇಕು.

(ಈ ಹಿಂದೆ ಪರೀಕ್ಷಾ ವಿಭಾಗದ ಆನ್‌ಲೈನನಲ್ಲಿ ಪರೀಕ್ಷಾ ಅರ್ಜಿ, ಫಲಿತಾಂಶ, ಮರುಸಂಕಲನ,ಮರುಮೌಲ್ಯಮಾಪನ ಹಾಗೂ ಉತ್ತರ ಪತ್ರಿಕೆಯ ಪ್ರತಿ ಪಡೆಯಲು ಸಾಮಾನ್ಯವಾಗಿ ಅರ್ಜಿ ಸಲ್ಲಿಸಲು ಅವಕಾಶ ನಿಡಲಾಗಿತ್ತು ಆದರೆ ವಿದ್ಯಾರ್ಥಿಗಳ ಹಿತದೃಷ್ಟಿ ಹಾಗೂ ಸದರಿ ವಿದ್ಯಾರ್ಥಿಗಳ ವಿವರದ ಗೌಪ್ಯತೆ, ಸುರಕ್ಷತೆಗಾಗಿ ವಿಶ್ವವಿದ್ಯಾಲಯವು ಪ್ರತಿ ವಿದ್ಯಾರ್ಥಿಗೆ ಪರೀಕ್ಷಾ ವಿಭಾಗ ಅಂತರ್ಜಾಲದಲ್ಲಿ ವಯಕ್ತಿಕವಾಗಿ USER ID ಮತ್ತು PASSWORD ಕ್ರೀಯೆಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸದರಿ USER ID ಮತ್ತು PASSWORD ನಿಂದ ಲಾಗಿನ್ ಆಗಿ ವಿದ್ಯಾರ್ಥಿಯು ಪರೀಕ್ಷಾ ವಿಭಾಗಕ್ಕೆ ಸಂಭಂದಿಸಿದ ಪರೀಕ್ಷಾ ಅರ್ಜಿ ಫಲಿತಾಂಶ, ಮರು ಸಂಕಲನ, ಮರು ಮೌಲ್ಯಮಾಪನ ಹಾಗೂ ಉತ್ತರ ಪತ್ರಿಕೆಯ ಪ್ರತಿ ಪಡೆಯಲು ಹಾಗೂ ಇತರೆ ಪರೀಕ್ಷಾ ಕಾರ್ಯಗಳಿಗೆ ಸಂಭಂಧಿಸಿದ ಮಾಹಿತಿಯನ್ನು ಪಡೆಯಬಹುದಾಗಿದೆ.)

USER ID ಮತ್ತು PASSWORD ಗಳನ್ನು Create ಮಾಡುವ ವಿಧಾನ

| | |
|---|---|
| Kswu.ac.in | |
| ↓ | |
| Logisys.net.in/studentportal | Click |
| ↓ | |
| Student Login | Click |
| ↓ | |
| Student Portel | Click |
| ↓ | |
| New User? Registration | Click |
| Registration | |
| Mobile Number | Enter Mobile Number |
| e-mail id | Enter E-Mal Id |
| State | Karnataka |
| Register Number/ Roll No | Enter Register Number/ Roll No |
| Date Of Birth | Enter Date Of Birth |
| Password | Enter Password |
| Conform Password | Conform Password |
| ↓ | |
| Validate | Click |
| ↓ | |
| Sent OTP | Click |

Click ಮಾಡಿದ ನಂತರ ವಿದ್ಯಾರ್ಥಿಯ ಮೊಬೈಲ ನಂಬರ ಹಾಗೂ ಇ-ಮೇಲ್ id ಗೆ ಬರುವ OTP (One Time Password) ನಮೋದಿಸಿದ ನಂತರ ಸದರಿ ವಿದ್ಯಾರ್ಥಿಯ USER IDಯು ನೋಂದಣಿಯಾಗುತ್ತದೆ ಸದರಿ USER ID ಮತ್ತು PASSWORD ನ್ನು ಬಳಸಿವಿದ್ಯಾರ್ಥಿಯು ಪರೀಕ್ಷಾ ವಿಭಾಗಕ್ಕೆ ಸಂಭಂಧಿಸಿದ ಪರೀಕ್ಷಾ ಅರ್ಜಿ ಫಲಿತಾಂಶ,ಮರು ಸಂಕಲನ, ಮರು ಮೌಲ್ಯಮಾಪನ ಹಾಗೂ ಉತ್ತರ ಪತ್ರಿಕೆಯ ಪ್ರತಿ ಪಡೆಯಲು ಅರ್ಜಿ ಹಾಗೂ ಇತರೆ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆಯಬಹುದಾಗಿದೆ. ವಿದ್ಯಾರ್ಥಿಯು USER ID ಮತ್ತು PASSWORD ನ್ನು ಮರೆತಲ್ಲಿ ಕೆಳಗಿನ ಸಹಾಯವಾಣಿಯನ್ನು ಸಂಪರ್ಕಿಸಬಹುದಾಗಿದೆ.

ಸೂಚನೆ: 1.ವಿದ್ಯಾರ್ಥಿಯು ಒಮ್ಮೆ ನೋಂದಣಿ ಮಾಡಲು ಬಳಸಿದ ಮೊಬೈಲ ನಂಬರ ಹಾಗೂ ಇ-ಮೇಲ್ ನ್ನು ಬೇರೆ ವಿದ್ಯಾರ್ಥಿಗಳು ಬಳಸುವಂತಿಲ್ಲ.

2.ಹೆಚ್ಚಿನ ವಿವರಗಳಿಗೆ ಹಾಗೂ ತಾಂತ್ರಿಕ ಸಲಹೆಗೆ ಸಹಾಯವಾಣಿ ಸಂಖ್ಯೆ 9742428898, 08352-229123 ಸಂಪರ್ಕಿಸಲು ಸೂಚಿಸಲಾಗಿದೆ. E-mail id kswu.logisys@gmail.com

2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಯಾವುದೇ ವಯಕ್ತಿಕ ಖಾತೆಯಿಂದ ಬ್ಯಾಂಕಿಂಗ್ ಮೂಲಕ ನೇರವಾಗಿ ಹಣ ಪಾವತಿಸಬಾರದು, ಆನಲೈನ್ ನಲ್ಲಿ ಚಲನ್ ಮುದ್ರಿಸಿಕೊಂಡು ಅಂಚೆ ಕಛೇರಿ ಮುಖಾಂತರ ಶುಲ್ಕ ಪಾವತಿಸಿದ ನಂತರ ಸಂಬಂದಿಸಿದ ಚಲನ್ ಪ್ರತಿ ಮತ್ತು ದಾಖಲಾತಿಗಳನ್ನು ಕಾಲೇಜಿಗೆ ಸಲ್ಲಿಸಬೇಕು, ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸದಲ್ಲಿ ಅಂತಹ ಅರ್ಜಿಗಳನ್ನು ಮಾನ್ಯ ಮಾಡಲಾಗುವದಿಲ್ಲ.

3. ರೂ 2.5/- ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಪ್ರೇಶರ್ ವಿದ್ಯಾರ್ಥಿನಿಯರಿಗೆ ಮಾತ್ರ ನಿಯಮಾನುಸಾರ ಪರೀಕ್ಷಾ ಶುಲ್ಕ ವಿನಾಯಿತಿ ಇರುತ್ತದೆ. ಆದರೆ ಅಂತಹ ಅಭ್ಯರ್ಥಿಗಳು ಅಂಕಪಟ್ಟಿ ಶುಲ್ಕ ಹಾಗೂ ಪರಿಶೀಲನಾ ಶುಲ್ಕವನ್ನು ಪಾವತಿಸಬೇಕು.

ಅ) ರೂ 2.5/- ಲಕ್ಷ ಆದಾಯಕ್ಕಿಂತ ಮೇಲ್ಪಟ್ಟ ಎಸ್.ಸಿ./ಎಸ್.ಟಿ ವಿದ್ಯಾರ್ಥಿನಿಯರು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

ಆ) ವಿನಾಯಿತಿ ಹೊಂದಿರುವ ಎಸ್.ಸಿ./ಎಸ್.ಟಿ ವಿದ್ಯಾರ್ಥಿನಿಯರ ಪರೀಕ್ಷಾ ಶುಲ್ಕವನ್ನು ಅವರುಗಳಿಗೆ ಮಂಜೂರಾಗುವ ವಿದ್ಯಾರ್ಥಿ ವೇತನದಿಂದ ಕಟಾಯಿಸಿ ಆಯಾ ಕಾಲೇಜುಗಳ ಪ್ರಾಂಶುಪಾಲರು ವಿಶ್ವವಿದ್ಯಾಲಯಕ್ಕೆ ತಪ್ಪದೆ ಜಮಾ ಮಾಡಬೇಕು.

ಇ) ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿನಿಯರು/ ವಿದ್ಯಾರ್ಥಿ ವೇತನ ಮಂಜೂರಾಗದ ವಿದ್ಯಾರ್ಥಿನಿಯರು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

4. ಆದಾಯಮೀತಿ ಹೊಂದಿರುವ 2ಎ,2ಬಿ,3ಎ,3ಬಿ ಹಾಗೂ ಪ್ರವರ್ಗ-1 ವಿದ್ಯಾರ್ಥಿನಿಯರು BA. BCom. BBA. BSW. BFT II IV & VI Semister ನ ಪರೀಕ್ಷಾ ಶುಲ್ಕ ರೂ 495/- ನ್ನು BCA BSc II IV & VI Semister ನ ಪರೀಕ್ಷಾ ಶುಲ್ಕ ರೂ 554/- ನ್ನು BHSc II IV & VI Semister ನ ಪರೀಕ್ಷಾ ಶುಲ್ಕ ರೂ 686/- ನ್ನು ಹಾಗೂ ಇತರ ಶುಲ್ಕಗಳನ್ನು ಭರಿಸಬೇಕು ನಂತರ ಸರ್ಕಾರದಿಂದ ನಿಯಮಾನುಸಾರ ಮಂಜುರಾದ ಶಿಷ್ಯವೇತನವನ್ನು ಸಂಭಂದಿಸಿದ ಕಾಲೇಜುಗಳ ಪ್ರಾಂಶುಪಾಲರು ವಿದ್ಯಾರ್ಥಿನಿಯರಿಗೆ ಪಾವತಿಸಬೇಕು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಹಾಗೂ ಮೇಲ್ಕಂಡ ಮೀಸಲಾತಿಗೆ ಒಳಪಡುವ ವರ್ಗಗಳ ಪುನರಾವರ್ತಿತ (ರೀಪಿಟರ್ಸ್) ವಿದ್ಯಾರ್ಥಿನಿಯರಿಗೆ ಹಾಗೂ ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿನಿಯರಿಗೆ ಯಾವುದೇ ಶುಲ್ಕ ವಿನಾಯಿತಿ ಇರುವದಿಲ್ಲ. ಶುಲ್ಕ ವಿನಾಯಿತಿ ಬಯಸುವ ಎಲ್ಲಾ ವಿದ್ಯಾರ್ಥಿನಿಯರು ಸಕ್ಷಮ ಅಧಿಕಾರಿಗಳಿಂದ ಪಡೆದ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಕಾಲೇಜಿಗೆ ಒಪ್ಪಿಸಬೇಕು.

5. **ವಿದ್ಯಾರ್ಥಿನಿಯರು ಅರ್ಜಿ ಪರಿಶಿಲನಾ ಶುಲ್ಕದ ರೂ13/- ರಲ್ಲಿ ರೂ 5/-ನ್ನು ಮಹಾವಿದ್ಯಾಲಯಕ್ಕೆ ಭರಿಸಿ ಉಳಿದ ರೂ 8/- ನ್ನು ಛಲನ್ ಮುಖಾಂತರ ಆನಲೈನ್ನಲ್ಲಿ ಭರಿಸಬೇಕು.**

6. ವಿದ್ಯಾರ್ಥಿನಿಯರು ಆನಲೈನ್ನಲ್ಲಿ ಅರ್ಜಿ ಸಲ್ಲಿಸುವಾಗ ತಾವು ವ್ಯಾಸಂಗ ಮಾಡುತ್ತಿರುವ ಕೊರ್ಸು,ಸೆಮಿಸ್ಟರ, ಹಾಗೂ ಆಯ್ಕೆಮಾಡಿಕೊಂಡ ವಿಷಯಗಳನ್ನು ತಪ್ಪಿಲ್ಲದಂತೆ ಅರ್ಜಿಯಲ್ಲಿ ನಮೂದಿಸತಕ್ಕದ್ದು ತಪ್ಪಿದಲ್ಲಿ ವಿದ್ಯಾರ್ಥಿನಿಯರೇ ಇದಕ್ಕೆ ಹೊಣೆಗಾರರು ಮತ್ತು ಕಾಲೇಜಿನ ಪ್ರಾಂಶುಪಾಲರು ಇದನ್ನು ಗಮನಿಸತಕ್ಕದ್ದು.

---------

# ಪ್ರಾಚಾರ್ಯರಿಗೆ ಸೂಚನೆಗಳು

1. ಕುಲಸಚಿವರು(ಆಡಳಿತ) ಶೈಕ್ಷಣಿಕ ವಿಭಾಗದಿಂದ ಪ್ರವೇಶಾತಿ ಅನುಮೋದನೆ ಆಗದೇ ಹಾಗೂ ಕಡಿಮೆ ಹಾಜರಾತಿ ಇರುವ ವಿದ್ಯಾರ್ಥಿನಿಯರು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ.

2. ಪ್ರವೇಶ ಪಡೆದ ವಿದ್ಯಾರ್ಥಿನಿಯರ ಮಾಹಿತಿಯನ್ನು ಆನ್‌ಲೈನ ಮುಂಖಾಂತರ ಸಲ್ಲಿಸಬೇಕು. ಹಾಗೂ ಹಾರ್ಡ ಕಾಫಿ ಮತ್ತು ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ಕಡ್ಡಾಯವಾಗಿ ವಿದ್ಯಾರ್ಥಿನಿಯರು ತಮ್ಮ ಕಾಲೇಜಿಗೆ ಸಲ್ಲಿಸಬೇಕು.

3. ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿನಿಯರ ಪ್ರವೇಶ ಪತ್ರವನ್ನು(Hall Ticket) ಆನ್‌ಲೈನ ಮುಖಾಂತರ ಡೌನಲೋಡ ಮಾಡಿಕೊಂಡು ಸಹಿಮಾಡಿ ವಿದ್ಯಾರ್ಥಿನಿಯರಿಗೆ ಕೊಡಬೇಕು.

4. ಪರೀಕ್ಷಾ ಶುಲ್ಕ ವಿನಾಯಿತಿ ನೀಡಿದ ಪ.ಜಾ/ಪ.ಪಂ ವಿದ್ಯಾರ್ಥಿನಿಯರ ಪಟ್ಟಿಗಳನ್ನು ವರ್ಗವಾರು ಪ್ರತ್ಯೇಕವಾಗಿ ತಯಾರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.

5. ತಮ್ಮ ಮಹಾವಿದ್ಯಾಲಯಕ್ಕೆ ಬೇಕಾಗುವ ರಿಪಿಟರ್ಸ ಓಲ್ಡ ಸ್ಕೀಮ ವಿದ್ಯಾರ್ಥಿನಿಯರ ಪ್ರಶ್ನೆ ಪತ್ರಿಕೆಗಳ ಬೇಡಿಕೆ ಪಟ್ಟಿಯನ್ನು ವಿಷಯವಾರು ಹಾಗೂ ಸೆಮಿಸ್ಟರವಾರು (ದ್ವಿಪ್ರತಿಗಳಲ್ಲಿ) ಈ ಕಛೇರಿಗೆ ದಿನಾಂಕ 27–03–2018 ರೊಳಗಾಗಿ ಹಾರ್ಡ ಕಾಪಿ ಸಾಫ್ಟ ಕಾಪಿ ಕಳುಹಿಸಲು ಕೋರಲಾಗಿದೆ. ಈ ಮಾಹಿತಿಯು ಸಕಾಲಕ್ಕೆ ತಲುಪದೆ ಹೋದಲ್ಲಿ ಅಥವಾ ದೋಷಪೂರ್ಣ ಮಾಹಿತಿ ಇದ್ದಲ್ಲಿ ಅದರಿಂದ ಆಗುವ ತೊಂದರೆಗಳಿಗೆ ಸಂಬಂಧಪಟ್ಟ ಮಹಾವಿದ್ಯಾಲಯದ ಪ್ರಾಂಶುಪಾಲರೇ ನೇರವಾಗಿ ಹೋಣೆಗಾರರಾಗುತ್ತಾರೆ.

6. ಪ್ರಾಂಶುಪಾಲರು, ತಮ್ಮ ಕಛೇರಿಯ ಸಿಬ್ಬಂದಿಗಳಿಗೆ ಈ ಅಧಿಸೂಚನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಅವರದಾಗಿರುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡುವಂತೆ ವಿನಂತಿಸಲಾಗಿದೆ.

7. ರೂ.2.5 ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯ ಹೊಂದಿರುವ ಪ.ಜಾ/ಪ.ಪಂ ಫ್ರೇಶರ್ ವಿದ್ಯಾರ್ಥಿಗಳಿಗೆ ಮಾತ್ರ ನಿಯಮಾನುಸಾರ ಶುಲ್ಕವಿನಾಯಿತಿ ಇರುತ್ತದೆ. ಆದರೆ ಅಂತಹ ವಿದ್ಯಾರ್ಥಿನಿಯರು ಅಂಕಪಟ್ಟಿ ಶುಲ್ಕ ಮತ್ತು ಪರೀಶಿಲನಾ ಶುಲ್ಕ ಪಾವತಿಸಬೇಕು.

8. ರೂ 2.5 ಲಕ್ಷ ಆದಾಯಕ್ಕಿಂತ ಮೇಲ್ಪಟ್ಟ ಎಸ್.ಸಿ/ಎಸ್.ಟಿ ವಿದ್ಯಾರ್ಥಿನಿಯರು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

9. ಪ್ರಾಚಾರ್ಯರಿಗೆ: ವಿನಾಯಿತಿ ಹೊಂದಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಅವರುಗಳಿಗೆ ಮಂಜೂರಾಗುವ ವಿದ್ಯಾರ್ಥಿವೇತನದಿಂದ ಕಟಾಯಿಸಿ ಆಯಾ ಕಾಲೇಜುಗಳ ಪ್ರಾಂಶುಪಾಲರು ಪರೀಕ್ಷಾ ಶುಲ್ಕಕ್ಕೆ ಸಂಬಂಧಪಟ್ಟ ಯಾವುದೇ ಹಣವನ್ನು ಆರ್ಥಿಕ ಅಧಿಕಾರಿಗಳು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ (Finance Officer, Akkamahadevi Women's University, Vijaypura) ಈ ಹೆಸರಿನಲ್ಲಿ ಹುಂಡಿ ಅಥವಾ ಚಲನ್ ಮೂಲಕ ವಿಶ್ವವಿದ್ಯಾಲಯದ ಸಿಂಡಿಕೇಟ ಬ್ಯಾಂಕ **ಉಳಿತಾಯ ಖಾತೆ ಸಂಖ್ಯೆ: 08632200000944** IFSC CODE 0000863 ಕ್ಕೆ ಸಂದಾಯ ಮಾಡಬಹುದು.

10. 2010–2011 ಹಾಗೂ 2011–2012 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು ಸ್ನಾತಕ ಪದವಿಯನ್ನು ಪೂರ್ಣಗೊಳಿಸದ II, IV, V(ರ) VI ನೇ ಸೆಮ್‌ನ ವಿದ್ಯಾರ್ಥಿನಿಯರಿಗೆಸಹ ಪರೀಕ್ಷಾ ಅರ್ಜಿ ತುಂಬಲು ಅವಕಾಶ ಕಲ್ಪಿಸಲಾಗಿದೆ.

11. ಸೈದ್ಧಾಂತಿಕ ಪರೀಕ್ಷೆ ನಡೆಸಲು ಬೇಕಾದ ಉತ್ತರ ಪತ್ರಿಕೆ ಬೇಡಿಕೆಯನ್ನು ಶ್ರೀ ಎಮ್.ಆಯ್ ಬಾಗಾಯತ, ವಿಷಯ ನಿರ್ವಾಹಕರು ಪರೀಕ್ಷಾ ವಿಭಾಗ ಇವರಿಗೆ ದಿನಾಂಕ 31-03-2018 ರೊಳಗಾಗಿ ತಲುಪಿಸಲು ಸೂಚಿಸಿದೆ. ಪರೀಕ್ಷೆಗೆ ಸಂಬಂದಿಸಿದ ಸುಪರವೈಸರ ಡೈರಿ, ಎ ಫಾರ್ಮ ಇವುಗಳನ್ನು ಆನಲೈನ್ ಮುಖಾಂತರ ಪಡೆದುಕೊಳ್ಳಲು ತಿಳಿಸಲಾಗಿದೆ ಹಾಗೂ ಹಾಗೂ ತಮ್ಮ ಕಾಲೇಜಿನಲ್ಲಿ ಸ್ಟಾಕ ಇರುವ ಉತ್ತರ ಪತ್ರಿಕೆಗಳ ಮಾಹಿತಿಯನ್ನು ಪರೀಕ್ಷಾ ವಿಭಾಗಕ್ಕೆ ಕಳುಹಿಸಿ ಕೊಡಬೇಕು.

12. **ಬಾರ ಕೊಡ ಹೊಂದಿದ ಹೊಸ ಉತ್ತರ ಪತ್ರಿಕೆಗಳನ್ನು ಮಾತ್ರ ಬಳಸಬೇಕು. ಹಳೆಯ ಉತ್ತರ ಪತ್ರಿಕೆಗಳನ್ನು ಯಾವುದೇ ಕಾರಣಕ್ಕು ಬಳಸುವಂತಿಲ್ಲ**

13. **ಆನಲೈನನಲ್ಲಿ ನೀಡಿರುವ ವಿದ್ಯಾರ್ಥಿನಿಯರ ಯಾದಿಯನ್ನು(Candidate List) ಕೋರ್ಸ ವಾರು ಪ್ರತ್ಯೆಕವಾಗಿ 3ಸೆಟ್ ಝರಾಕ್ಸ ಪ್ರತಿಗಳನ್ನು ವಿಶ್ವವಿದ್ಯಾಲಯಕ್ಕೆ ತಪ್ಪದೆ ಸಲ್ಲಿಸಲು ಸೂಚಿಸಲಾಗಿದೆ. ಹಾಗೂ ವಿದ್ಯಾರ್ಥಿನಿಯರು ಆನಲೈನ್ ನಲ್ಲಿ ತುಂಬಿದ ಅರ್ಜಿಗಳನ್ನು ತಮ್ಮ ಕಾಲೇಜಿನಲ್ಲಿಯೇ ಸಂರಕ್ಷಿಸಿಟ್ಟುಕೊಂಡು ನಂತರ ವಿಶ್ವವಿದ್ಯಾಲಯಕ್ಕೆ ಅಗತ್ಯವಿದ್ದಾಗ ಕಳುಹಿಸಿಕೊಡಲು ಕೋರಲಾಗಿದೆ.**

14. ಆಂತರಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ತಮ್ಮ ಕಾಲೇಜಿನಲ್ಲಿಯೇ ಸಂರಕ್ಷಿಸಿಟ್ಟುಕೊಂಡು ನಂತರ ವಿಶ್ವವಿದ್ಯಾಲಯಕ್ಕೆ ಅಗತ್ಯವಿದ್ದಾಗ ಕಳುಹಿಸಿಕೊಡಲು ಕೋರಲಾಗಿದೆ.

15. ಯಾವುದೇ ವಿದ್ಯಾರ್ಥಿನಿಯರ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದಿಸದೇ ಬಿಟ್ಟುಹೋದಲ್ಲಿ ಯಾವುದೇ ಕಾರಣಕ್ಕೂ ಹಾರ್ಡಕಾಪಿಯನ್ನು ನಂತರ ಕಾಲೇಜಿನಿಂದ ಕಳುಹಿಸಿಕೊಟ್ಟಲ್ಲಿ ಅದನ್ನು ಪರಗಣಿಸಲಾಗುವುದಿಲ್ಲ ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು.

16. ಪರೀಕ್ಷಾ ಒಟ್ಟು ಶುಲ್ಕ ಹಾಗೂ ಇತರ ಶುಲ್ಕಗಳನ್ನು ಹೊರತು ಪಡಿಸಿ ಪ್ರತಿ ವಿದ್ಯಾರ್ಥಿನಿಯು ಆನಲೈನ್ನಲ್ಲಿ ಅರ್ಜಿ ಸಲ್ಲಿಸಿದ ನಂತರ ಹಾರ್ಡಕಾಪಿಗಳನ್ನು ಸಂಬಂಧ ಪಟ್ಟ ಕಾಲೇಜುಗಳಿಗೆ ಸಲ್ಲಿಸುವಾಗ ಪ್ರತಿವಿದ್ಯಾರ್ಥಿನಿಯು ರೂ 20/- ಗಳನ್ನು ಕಾಲೇಜಿಗೆ ಪಾವತಿಸಬೇಕು. ಕಾಲೇಜಿನ ಪ್ರಾಚಾರ್ಯರು ರೂ 20/- ಗಳನ್ನು ಪರೀಕ್ಷಾ ಸಾದಿಲ್ವಾರು ವೆಚ್ಚವಾಗಿ ಬಳಸಿಕೋಳ್ಳಲು ತಿಳಿಸಲಾಗಿದೆ.

17. ಆದಾಯಮೀತಿ ಹೊಂದಿರುವ 2ಎ,2ಬಿ,3ಎ,3ಬಿ ಹಾಗೂ ಪ್ರವರ್ಗ-1 ವಿದ್ಯಾರ್ಥಿನಿಯರು BA. BCom. BBA. BSW. BFT II IV & VI Semister ನ ಪರೀಕ್ಷಾ ಶುಲ್ಕ ರೂ 495/- ನ್ನು BCA BSc II IV & VI Semister ನ ಪರೀಕ್ಷಾ ಶುಲ್ಕ ರೂ 554/- ನ್ನು BHSc II IV & VI Semister ನ ಪರೀಕ್ಷಾ ಶುಲ್ಕ ರೂ 686/- ನ್ನು ಹಾಗೂ ಇತರ ಶುಲ್ಕಗಳನ್ನು ಭರಿಸಬೇಕು ನಂತರ ಸರ್ಕಾರದಿಂದ ನಿಯಮಾನುಸಾರ ಮಂಜುರಾದ ಶಿಷ್ಯವೇತನವನ್ನು ಸಂಭಂದಿಸಿದ ಕಾಲೇಜುಗಳ ಪ್ರಾಂಶುಪಾಲರು ವಿದ್ಯಾರ್ಥಿನಿಯರಿಗೆ ಪಾವತಿಸಬೇಕು. ಎಂದು ಈ ಮೂಲಕ ತಿಳಿಸಲಾಗಿದೆ.

16/3/18

ಕುಲಸಚಿವರು (ಪರೀಕ್ಷಾ ವಿಭಾಗ)
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ
ವಿಜಯಪುರ

ಗೆ,

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರಕ್ಕೆ ಒಳಪಡುವ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:

1. ಆಪ್ತಶಾಖೆ, ಮಾನ್ಯಕುಲಪತಿಗಳು, ಕುಲಸಚಿವರು(ಆಡಳಿತ ವಿಭಾಗ), ಕುಲಸಚಿವರು(ಪರೀಕ್ಷಾ ವಿಭಾಗ), ಹಣಕಾಸು ಅಧಿಕಾರಿಗಳು, ಅ.ಮ.ಮ.ವಿಶ್ವವಿದ್ಯಾನಿಲಯ, ವಿಜಯಪುರ.
2. ಎಲ್ಲಾ ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಅ.ಮ.ಮ.ವಿಶ್ವವಿದ್ಯಾನಿಲಯ, ವಿಜಯಪುರ.
3. ಕಛೇರಿ ಪ್ರತಿ.